ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**KARNATAK UNIVERSITY, DHARWAD**

**Academic Section**

**NAAC Accredited with 'A' Grade-2014**

**No.KU/Aca/P.G./Ph.D/SSK/2019-20/171** **Date:02.08.2019**

## ಸುತ್ತೋಲೆ

**ವಿಷಯ : ಸನ್ 2019–20ನೇ ಸಾಲಿನ ಮೂರು ರೌಂಡ್‌ಗಳ ಕೌನ್ಸಲಿಂಗ್ ಪ್ರಕ್ರಿಯೆ ನಂತರವು ಸ್ನಾತಕೋತ್ತರ ವಿವಿಧ ವಿಷಯಗಳಲ್ಲಿ ಖಾಲಿ ಉಳಿದ ಸೀಟುಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು.**

**ಉಲ್ಲೇಖ : 1. ಸಂ : ಕ.ವಿ.ವಿ./ವಿ.ಮಂ/ಪಿ.ಜಿ/ಕೌನ್ಸಲಿಂಗ್/ಪ್ರವೇಶ/2019–20/159 ದಿನಾಂಕ :05.07.2019**
**2. ಮಾನ್ಯ ಕುಲಪತಿಗಳ ಆದೇಶ ದಿನಾಂಕ:02.08.2019**

ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸನ್ 2019–20ನೇ ಸಾಲಿನ ಸ್ನಾತಕೋತ್ತರ ಕೋರ್ಸಗಳ ಮೂರು ರೌಂಡ್‌ಗಳ ಕೌನ್ಸಲಿಂಗ್ ಪ್ರಕ್ರಿಯೆ ನಂತರವು ವಿವಿಧ ವಿಷಯಗಳಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಈ ಕೆಳಕಾಣಿಸಿದ ನಿಯಮಗಳನ್ನು ಪಾಲಿಸಿ, ಆಯಾ ವಿಭಾಗಗಳಲ್ಲಿ **ದಿನಾಂಕ: 14.08.2019ರಂದು** ಕೊನೆಯ ಸುತ್ತಿನ ಕೌನ್ಸಲಿಂಗ್ ಜರುಗಿಸಿ ಭರ್ತಿಮಾಡಿಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

1. ಈಗಾಗಲೇ ಮೂರು ರೌಂಡ್(Spot)ಗಳ ಕೌನ್ಸಲಿಂಗ್ ಪ್ರಕ್ರಿಯೆ ಮುಗಿಸಿದ ನಂತರವೂ, ಆಯಾವಿಭಾಗದಲ್ಲಿ/ ಸ್ನಾತಕೋತ್ತರ ಕೇಂದ್ರಗಳಲ್ಲಿ ಮತ್ತು ಕ.ವಿ.ವಿ. ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯದ ಕೋಟಾ ಮತ್ತು ಸರ್ಕಾರಿ ಮಹಾವಿದ್ಯಾಲಯಗಳಲ್ಲಿ (ಸಂಪೂರ್ಣ ಕೋಟಾ) ಖಾಲಿ ಉಳಿದ ಒಟ್ಟು ಸೀಟುಗಳ ಮಾಹಿತಿಯನ್ನು ನೋಟಿಸ್ ಬೋರ್ಡನಲ್ಲಿ ಮತ್ತು ಕ.ವಿ.ವಿ. ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. ಸದರ ಮಾಹಿತಿಯನ್ನು ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ ಇವರಿಗೆ **ದಿನಾಂಕ: 10.08.2019** ರೊಳಗಾಗಿ ಸಲ್ಲಿಸಬೇಕು.
2. ಕೆಲವು ಸ್ನಾತಕೋತ್ತರ ವಿಭಾಗಗಳಲ್ಲಿ ಒಟ್ಟು ಕಾಯ್ದಿರಿಸಿದ ಸೀಟುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸ್ವೀಕೃತವಾಗಿ ಎಲ್ಲ ಸೀಟುಗಳು ಭರ್ತಿಯಾಗದಿದ್ದಲ್ಲಿ, ಅಂತಹ ವಿಭಾಗಗಳಲ್ಲಿ ಹೊಸದಾಗಿ ಅರ್ಜಿ ಸ್ವೀಕರಿಸುವುದು ಮತ್ತು ಪ್ರವೇಶ ಪರೀಕ್ಷೆ ನಡೆಸುವುದು ಅವಶ್ಯವಿರುವುದಿಲ್ಲ. ಇಂತಹ ವಿಭಾಗಗಳಲ್ಲಿ ಖಾಲಿ ಉಳಿದ ಸೀಟುಗಳಿಗೆ ಈ ಮೊದಲೇ ಅರ್ಜಿಸಲ್ಲಿಸಿ ಪ್ರವೇಶ ಪರೀಕ್ಷೆಗೆ ಹಾಜರಾಗಿ ಅರ್ಹ ವಿದ್ಯಾರ್ಥಿಗಳ **ಜೇಷ್ಠತಾ ಪಟ್ಟಿ** (Merit List)**ಯನ್ನು ದಿನಾಂಕ : 10.08.2019 ರಂದು ಪ್ರಕಟಿಸಿ ಮೇರಿಟ್ ಕಮ್ ರೋಸ್ಟರ್** ಆಧಾರದ ಮೇಲೆ ಅಂತಿಮ ಸುತ್ತಿನ ಕೌನ್ಸಲಿಂಗ್ ಪ್ರಕ್ರಿಯೆಯನ್ನು **ದಿನಾಂಕ:14.08.2019ರಂದು** ಜರುಗಿಸಿ ಪ್ರವೇಶ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವುದು.
3. ಕೆಲವು ಸ್ನಾತಕೋತ್ತರ ವಿಭಾಗಗಳಲ್ಲಿ ಒಟ್ಟು ಕಾಯ್ದಿರಿಸಿದ ಸೀಟುಗಳಕ್ಕಿಂತ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುವುದರಿಂದ ಒಟ್ಟು ಕಾಯ್ದಿರಿಸಿದ ಸೀಟುಗಳು ಪೂರ್ತಿ ಭರ್ತಿಯಾಗದೇ ಖಾಲಿ ಉಳಿದಿರುವ ಕಾರಣ ಅಂತಹ ಸೀಟುಗಳನ್ನು ಭರ್ತಿಮಾಡಲು ಹೊಸದಾಗಿ ಅರ್ಜಿಗಳನ್ನು ಸಲ್ಲಿಸಲು ದಿನಾಂಕ:**08.08.2019** ಕೊನೆಯ ದಿನಾಂಕವಾಗಿದೆ. ಹೊಸದಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ದಿನಾಂಕ:**14.08.2019** ರಂದು ಮದ್ಯಾಹ್ನ 12.00 ಗಂಟೆ ಯಿಂದ 1.15 ಗಂಟೆಯ ವರೆಗೆ ಕಡ್ಡಾಯವಾಗಿ ನಡೆಸುವುದು. ಮುಂದುವರೆದು ಈಗಾಗಲೇ ಆಯಾ ವಿಭಾಗದಲ್ಲಿ ಪ್ರವೇಶ ಪರೀಕ್ಷೆಗೆ ತಯಾರಿಸಿದ ಎರಡು ಪ್ರತಿ ಪ್ರಶ್ನೆ ಪತ್ರಿಕೆಯ ಪ್ರತಿಗಳನ್ನು ಕುಲಸಚಿವರು(ಮೌಲ್ಯಮಾಪನ), ಪರೀಕ್ಷಾ ವಿಭಾಗ ಇವರಿಂದ ಪಡೆಯುವುದು. ಇಂತಹ ವಿಭಾಗಗಳಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ಹೊಸದಾಗಿ ಅರ್ಜಿ ಸಲ್ಲಿಸಿ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ **ಜೇಷ್ಠತಾ ಪಟ್ಟಿ** (Merit List)**ಯನ್ನು ದಿನಾಂಕ : 20.08.2019 ರಂದು ಪ್ರಕಟಿಸಿ ಮೇರಿಟ್ ಕಮ್ ರೋಸ್ಟರ್** ಆಧಾರದ

ಮೇಲೆ ಅಂತಿಮ ಸುತ್ತಿನ ಕೌನ್ಸಲಿಂಗ್ ಪ್ರಕ್ರಿಯೆಯನ್ನು **ದಿನಾಂಕ: 23.08.2019ರಂದು** ಜರುಗಿಸಿ ಪ್ರವೇಶ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವುದು.

4. ಅಂತಿಮ ಸುತ್ತಿನ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿಯೂ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ/ಸ್ನಾತಕೋತ್ತರ ಕೇಂದ್ರಗಳಲ್ಲಿ ಮತ್ತು ಕ.ವಿ.ವಿ. ಸಂಲಗ್ನ/ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯದ ಕೋಟಾ/ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಸಂಪೂರ್ಣ ಕೋಟಾದಡಿಯಲ್ಲಿ ಕ.ವಿ.ವಿ. ವಿದ್ಯಾರ್ಥಿಗಳು ಪ್ರವೇಶ ಪಡೆಯದೇ ಸೀಟುಗಳು ಖಾಲಿ ಉಳಿದಲ್ಲಿ ಸದರ ಸೀಟುಗಳನ್ನು ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಇಚ್ಛಿಸಿದಲ್ಲಿ, ಮೇರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಹೆಚ್ಚುವರಿ (Enhanced)ಶುಲ್ಕದಡಿಯಲ್ಲಿಯೇ ಆದಿನವೇ ಪ್ರವೇಶ ನೀಡಲು ಈ ಮೂಲಕ ತಿಳಿಸಲಾಗಿದೆ.
5. ಅಂತಿಮ ಸುತ್ತಿನ ಕೌನ್ಸಲಿಂಗ್ ಪ್ರಕ್ರಿಯೆಯಲ್ಲಿಯೂ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ/ಸ್ನಾತಕೋತ್ತರ ಕೇಂದ್ರಗಳಲ್ಲಿ ಮತ್ತು ಕ.ವಿ.ವಿ. ಸಂಲಗ್ನ ಮಹಾವಿದ್ಯಾಲಯದಲ್ಲಿ ಹೊರವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಮಾಡಿದ ಸೀಟುಗಳಿಗೆ ಹೊರವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರವೇಶ ಪಡೆಯದೇ ಸೀಟುಗಳು ಖಾಲಿ ಉಳಿದಲ್ಲಿ, ಸದರ ಸೀಟುಗಳನ್ನು ಕ.ವಿ.ವಿ. ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಇಚ್ಛಿಸಿದಲ್ಲಿ ಮೇರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಹೆಚ್ಚುವರಿ (Enhanced)ಶುಲ್ಕದಡಿಯಲ್ಲಿಯೇ ಆ ದಿನವೇ ಪ್ರವೇಶ ನೀಡಲು ಈ ಮೂಲಕ ತಿಳಿಸಲಾಗಿದೆ.
6. ಸ್ನಾತಕೋತ್ತರಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸಗಳಿಗೆ ಪ್ರವೇಶ ಅರ್ಜಿಗಳನ್ನು ಸ್ವೀಕರಿಸಲು **ದಿನಾಂಕ:17.08.2019** ರವರೆಗೆ ನಿಗದಿಪಡಿಸಲಾಗಿದೆ. ಸದರ ಸ್ನಾತಕೋತ್ತರಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸಗಳಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಮೇರಿಟ್ ಕಮ್ ರೋಸ್ಟರ್ ಆಧಾರದ ಮೇಲೆ **ದಿನಾಂಕ:28.08.2019**ರೊಳಗಾಗಿ ಪ್ರವೇಶ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವುದು.
7. ಹೊರವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು **ದಿ:31.08.2019**ರೊಳಗಾಗಿ ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣಪತ್ರ(**Eligibility Certificate**) ಪಡೆಯುವುದು ಕಡ್ಡಾಯವಾಗಿರುತ್ತದೆ. ಅರ್ಹತಾ ಪ್ರಮಾಣಪತ್ರ (**Eligibility Certificate**)ಪಡೆಯದಿದ್ದಲ್ಲಿ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಕ್ರಮ ಜರುಗಿಸಲಾಗುವುದು.

ಸಹಿ ಇದೆ.

**ಕುಲಸಚಿವರು**

**ಪ್ರತಿಯನ್ನು ಸಾದರಪೂರ್ವಕವಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ :**

**1. ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಕೋ-ಆರ್ಡಿನೇಟರುಗಳು ಕಾರವಾರ/ಹಾವೇರಿ/ಗದಗ/ ದಾಂಡೇಲಿ., ಕ.ವಿ.ವಿ ಧಾರವಾಡ.**

**2. ಕುಲಸಚಿವರು (ಮೌಲ್ಯಮಾಪನ) ಕ.ವಿ.ವಿ ಧಾರವಾಡ.**

**3. ವಿತ್ತಾಧಿಕಾರಿಗಳು, ಹಣಕಾಸು ವಿಭಾಗ, ಕ.ವಿ.ವಿ. ಧಾರವಾಡ.**